# ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ

ಮೊಬೈಲ್ ನಂ: 9448470119
ದೂರವಾಣಿ: 08482-227550
E-mail : aeebidargescom@gmail.com

ಕಛೇರಿ ರವರ
ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಕಾ ಮತ್ತು ಪಾ, ಉಪ ವಿಭಾಗ, ಗುವಿಸಕಂನಿ, ಬೀದರ

ಸಂಖ್ಯೆ: ಬೀದರ/ಸಕಾನಿಅ(ವಿ)/ಸಇಂ(ತಾ)/19-20/6696-6704 ದಿನಾಂಕ:- 26/12/19

## :: ಗ್ರಾಹಕರ ಸಂವಾದ ಸಭೆಯ ನಡುವಳಿಗಳು ::

ಕರ್ನಾಟಕ ಘನ ಸರ್ಕಾರ ಹಾಗೂ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಆದೇಶದಂತೆ ದಿನಾಂಕ: 21-12-2019 ರಂದು ಮಧ್ಯಾಹ್ನ 03:00 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಮಾನ್ಯ ಅಧೀಕ್ಷಕ ಅಭಿಯಂತರರು(ವಿ/ಕಾರ್ಯನಿರ್ವಾಹಕ ಅಭಿಯಂತರರು(ವಿ) ಕಾರ್ಯ ಮತ್ತು ಪಾಲನೆ ವಿಭಾಗ ಬೀದರ ರವರ ಅಧ್ಯಕ್ಷತೆಯಲ್ಲಿ ಜರುಗಿತು.

**(ಸಭೆಗೆ ಹಾಜರಿದ್ದ ವಿದ್ಯುತ್ ಗ್ರಾಹಕರ ಹಾಗೂ ಅಧಿಕಾರಿಗಳ ಪಟ್ಟಿ ಲಗತ್ತಿಸಿದೆ.)**

ಪ್ರಾರಂಭದಲ್ಲಿ ಬೀದರ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ) ರವರು ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳನ್ನು ಹಾಗೂ ಗೌರವಾನ್ವಿತ ವಿದ್ಯುತ್ ಗ್ರಾಹಕರನ್ನು ಆದರದಿಂದ ಬರಮಾಡಿ ಸ್ವಾಗತಕೋರಿ, ಮಾನ್ಯ ಅಧ್ಯಕ್ಷರಿಗೆ ಸಭೆಯನ್ನು ಆರಂಭಿಸಲು ಮನವಿ ಮಾಡಿದರು.

ಮಾನ್ಯ ಅಧ್ಯಕ್ಷರು ಎಲ್ಲರನ್ನು ಸ್ವಾಗತಿಸಿ ಎಲ್ಲಾ ವಿದ್ಯುತ್ ಗ್ರಾಹಕರಲ್ಲಿ ತಮ್ಮ ಭಾಗದ ವಿದ್ಯುತ್ ಬಗೆಗಿನ ತೊಂದರೆಗಳನ್ನು ತಿಳಿಸಬೇಕಾಗಿ ಮನವಿ ಮಾಡಿಕೊಂಡರು.

**:: ಮಾನ್ಯ ಅಧ್ಯಕ್ಷರು ಕೆಳಗಿನಂತೆ ಕಾರ್ಯ ಕಲಾಪಗಳನ್ನು ಆರಂಭಿಸಿದರು.:**

1) ಮಾನ್ಯ ಗ್ರಾಹಕರಾದ ಶ್ರೀ ಹಣಮಂತಪ್ಪಾ ಸಾ॥ ಗುನ್ನಳ್ಳಿ ಆರ್.ಆರ್.ಸಂಖ್ಯೆ: UPGNIP-86855 ಅವರು ಮಾತನಾಡುತ್ತಾ 25ಕೆವಿಎ ವಿದ್ಯುತ್ ಪರಿವರ್ತಕ (ಟ್ರಾನ್ಸ್ ಫಾರ್ಮರ್) ಬದಲಾಗಿ ಅಧಿಕ ಭಾರವಿರುವ 63ಕೆವಿಎ ಟ್ರಾನ್ಸ್ ಫಾರ್ಮರ್ ಅಳವಡಿಸಲು ಮನವಿ ಮಾಡಿರುತ್ತಾರೆ.

   ಈ ಬಗ್ಗೆ ಮಾನ್ಯ ಅಧ್ಯಕ್ಷರು ಶಾಖಾಧಿಕಾರಿ ಶಾಖೆ ಡಿ-3 ಅವರಿಗೆ ಸ್ಥಳ ಪರಿಶೀಲನೆ ಮಾಡಿ ಆ ವಿದ್ಯುತ್ ಪರಿವರ್ತಕಗಳ ಮೇಲೆ ಅನಧೀಕೃತವಾಗಿ ಚಾಲ್ತಿಯಲ್ಲಿರುವ ಐ.ಪಿ.ಸೆಟ್ಟುಗಳನ್ನು ಸಕ್ರಮಗೊಳಿಸಿ ಅಂದಾಜು ಪಟ್ಟಿಯನ್ನು ಸಲ್ಲಿಸಲು ಸೂಚಿಸಿರುತ್ತಾರೆ.

2) ಮಾನ್ಯ ಗ್ರಾಹಕರಾದ ಶ್ರೀ ಬಸವರಾಜ ತಂದೆ ಶರಣಪ್ಪಾ ಸಾ॥ ಮಲ್ಕಾಪೂರ ಮೋ.9008501833 ದುಸ್ಥಿತಿಯಲ್ಲಿರುವ 63ಕೆವಿಎ ಐ.ಪಿ.ಸೆಟ್ಟು ಪರಿವರ್ತಕವನ್ನು ದುರಸ್ಥಿ ಮಾಡಿಕೊಡುವಂತೆ ಮನವಿ ಮಾಡಿರುತ್ತಾರೆ.

   ಈ ಬಗ್ಗೆ ಮಾನ್ಯ ಅಧ್ಯಕ್ಷರು ಶಾಖಾಧಿಕಾರಿ ಡಿ-3 ಅವರಿಗೆ ಸ್ಥಳ ಪರಿಶೀಲನೆ ಮಾಡಿ ವಿದ್ಯುತ್ ಪರಿವರ್ತಕದ ಸಮಸ್ಯೆಯನ್ನು ಬಗೆಹರಿಸುವಂತೆ ನಿರ್ದೇಶನ ನೀಡಿರುತ್ತಾರೆ.

AEE.

Scanned by CamScanner

3) ಮಾನ್ಯ ಗ್ರಾಹಕರಾದ ಶ್ರೀ ಅರ್ಜುನ್ರ ತಂದೆ ಸಿದ್ರಾಮ ಸಾ॥ ಶಹಾಪೂರ ಮೋ.9482263179 ಆರ್.ಆರ್.ಸಂಖ್ಯೆ: SHIP86266 ಅವರು ಮಾತನಾಡುತ್ತಾ ಅನಧೀಕೃತವಾಗಿ ಪಂಪುಸೆಟ್ಟು ಸಕ್ರಮಗೊಳಿಸುವ ಯೋಜನೆ ಅಡಿಯಲ್ಲಿ ಭದ್ರತಾ ಠೇವಣಿ ಮತ್ತು ದಂಡ ಶುಲ್ಕ ಪಾವತಿ ಮಾಡಿದ್ದು ವಿದ್ಯುತ್ ಕಂಬ ಮತ್ತು ತಂತಿ ಅಳವಡಿಸಿ ಕೆಲಸ ಮಾಡಬೇಕೆಂದು ಮನವಿ ಮಾಡಿರುತ್ತಾರೆ.

ಈ ಬಗ್ಗೆ ಮಾನ್ಯ ಅಧ್ಯಕ್ಷರು ಗ್ರಾಹಕರಿಗೆ ಮನವರಿಕೆ ಮಾಡುತ್ತಾ ಯು.ಎ.ಐ.ಪಿ. ಯೋಜನೆ ಅಡಿಯಲ್ಲಿ ಶುಲ್ಕ ಪಾವತಿಸಿದ ರೈತರ ಮೂಲ ಸೌಕರ್ಯ ಕಲ್ಪಿಸಿ ವಿದ್ಯುತ್ ಸಂಪರ್ಕ ಒದಗಿಸಲು ಈಗಾಗಲೇ ಟೆಂಡರ್ ಕರೆಯಲಾಗಿದ್ದು ಮೇ॥ ರಂಗನಾಥ ಎಲೆಕ್ಟ್ರಿಕಲ್ ರವರಿಗೆ ಟೆಂಡರ್ ನೀಡಲಾಗಿದೆ ಆದಷ್ಟು ಬೇಗನೆ ಕೆಲಸ ಮಾಡಲಾಗುವುದು ಎಂದು ತಿಳಿಸಿರುತ್ತಾರೆ.

ಕೊನೆಯಲ್ಲಿ ಉಪ-ವಿಭಾಗದ ಸ.ಕಾ.ನಿ.ಅ(ವಿ). ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ನೌಕರರು ಹಾಗೂ ಕಂಪನಿಯ ಎಲ್ಲಾ ಗೌರವಾನ್ವಿತ ಗ್ರಾಹಕರಿಗೆ ವಂದಿಸಿ ಆದಷ್ಟು ಬೇಗನೆ ಎಲ್ಲಾ ತಮ್ಮ ಸಮಸ್ಯೆಗಳನ್ನು ನಿವಾರಣೆ ಮಾಡಲಾಗುವುದು ಎಂದು ಆಶ್ವಾಸನೆ ನೀಡಿ ಸಭೆಯನ್ನು ವಿಸರ್ಜಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು(ವಿ),
ಉಪ ವಿಭಾಗ, ಗುವಿಸಕಂನಿ, ಬೀದರ.

**ಪ್ರತಿಗಳು ತಮ್ಮ ದಯಾಪರ ಮಾಹಿತಿಗಾಗಿ:-**

1) ಮುಖ್ಯ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಲಯ, ಗುವಿಸಕಂನಿ, ಕಲಬುರಗಿ.
2) ಅಧೀಕ್ಷಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಗುವಿಸಕಂನಿ, ಬೀದರ
3) ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನೆ ವಿಭಾಗ, ಗುವಿಸಕಂನಿ, ಬೀದರ

**ಪ್ರತಿಗಳು:-**

1) ಶಾಖಾಧಿಕಾರಿಗಳು ಕಾರ್ಯ ಮತ್ತು ಪಾಲನೆ ಡಿ-3/ಮನ್ನಳ್ಳಿ/ಜನವಾಡ/ಚಿಮಕೋಡ್/ಡಿ-1/ ಡಿ-2/ ಡಿ-4/ ಡಿ-5/ ಡಿ-6 ಶಾಖೆ,ಗುವಿಸಕಂನಿ, ಬೀದರ.

ಮು.ಕ./ಕಚೇರಿ ಪತ್ರಿ

Scanned by CamScanner

**21-12-2019 ಗ್ರಾಹಕರ ಸಂವಾದ ಸಭೆಗೆ ಹಾಜರಿದ್ದ ಅಧಿಕಾರಿಗಳು ಹಾಗೂ ಗೌರವಾನ್ವಿತ ವಿದ್ಯುತ್ ಗ್ರಾಹಕರ ಪಟ್ಟಿ ಈ ಕೆಳಗಿನಂತಿದೆ.**

| | |
|---|---|
| 1) ಶ್ರೀ ಎಮ್.ಎಮ್. ಪವಾರ | ಅಧೀಕ್ಷ ಅಭಿಯಂತರರು(ವಿ) ವೃತ್ತ, ಬೀದರ. |
| 2) ಶ್ರೀ ಸಂತೋಷ ಚವ್ಹಾಣ | ಕಾರ್ಯನಿರ್ವಾಹಕ ಅಭಿಯಂತರರು(ವಿ) ವಿಭಾಗ, ಬೀದರ. |
| 3) ಶ್ರೀ ವೀರಣ್ಣಾ ಮುದ್ನಾಳೆ | ಸ.ಕಾನಿ.ಅ(ವಿ) ಉಪ ವಿಭಾಗ ಬೀದರ. |
| 4) ಶ್ರೀ ಅನೀಲ ಪಾಟೀಲ್ | ಸ.ಇಂ(ವಿ) ತಾಂತ್ರಿಕ ಶಾಖೆ ಬೀದರ. |
| 5) ಶ್ರೀ ಪ್ರಕಾಶ | ಸ.ಇಂ(ವಿ) ಡಿ-1 ಶಾಖೆ ಬೀದರ. |
| 6) ಶ್ರೀ ನಟರಾಜ | ಸ.ಇಂ(ವಿ) ಡಿ-5 ಶಾಖೆ ಬೀದರ. |
| 7) ಶ್ರೀ ಶ್ರೀಮಂತ | ಪ್ರಭಾರಿ ಸ.ಇಂ(ವಿ) ಡಿ-2 ಶಾಖೆ ಬೀದರ. |
| 8) ಶ್ರೀ ಹಣಮಂತ | ಸ.ಇಂ(ವಿ) ಡಿ-4 ಶಾಖೆ ಬೀದರ |
| 9) ಶ್ರೀ ಕವಿರಾಜ | ಕಿ.ಇಂ(ವಿ) ಡಿ-6 ಶಾಖೆ ಬೀದರ |
| 10) ಶ್ರೀ ಅನೀಲ ಬಿರಾದಾರ | ಕಿ.ಇಂ(ವಿ) ಡಿ-3 ಶಾಖೆ ಬೀದರ |
| 11) ಶ್ರೀ ಸಂಜುಕುಮಾರ | ಕಿ.ಇಂ(ವಿ) ಮನ್ನಳ್ಳಿ ಶಾಖೆ ಬೀದರ. |
| 12) ಶ್ರೀ ಶಿವಾನಂದ | ಕಿ.ಇಂ(ವಿ) ಚಿಮಕೋಡ್ ಶಾಖೆ ಬೀದರ. |
| 13) ಶ್ರೀ ದಿಗಂಬರ್ | ಕಿ.ಇಂ.(ವಿ) ಜನವಾಡ ಶಾಖೆ, |

13) ಶ್ರೀ ಹಣಮಂತಪ್ಪಾ ಸಾ।। ಗುನ್ನಳ್ಳಿ ಬೀದರ.

14) ಶ್ರೀ ಶ್ರೀ ಬಸವರಾಜ ತಂದೆ ಶರಣಪ್ಪಾ ಸಾ।। ಮಲ್ಕಾಪೂರ ಬೀದರ.

15) ಶ್ರೀ ಅರ್ಜುನ್ರ ತಂದೆ ಸಿದ್ರಾಮ ಸಾ।। ಶಹಾಪೂರ ಬೀದರ.

Scanned by CamScanner